# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ. : 821

2. ಸದಸ್ಯರ ಹೆಸರು. : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)

3. ಉತ್ತರಿಸಬೇಕಾಗಿದ್ದ ದಿನಾಂಕ: : 23.2.2023

4. ಉತ್ತರಿಸುವವರು. : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಾಹಣ ವರದಿಗಳು) ನಿಯಮಗಳು, 2000 ರ ನಿಯಮಗಳಿಗೆ ಅಧಿಸೂಚನೆ ಸಂಖ್ಯೆ:ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ 26 ಸೇವನೆ 2020, ದಿನಾಂಕ:15.7.2020 ರಲ್ಲಿ ತಿದ್ದುಪಡಿ ಮಾಡಿ ಗ್ರೂಪ್-ಬಿ ಮತ್ತು ಸಿ ವೃಂದದ ಅಧಿಕಾರಿ ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್ ಮೂಲಕ ದಾಖಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ; ಈ ಆದೇಶದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸದರಿ ಅಧಿಕಾರಿ/ನೌಕರರ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆನ್ | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಅಧಿಸೂಚನೆ ಸಂಖ್ಯೆ:ಸಿಆಸುಇ 26 ಎಸ್‌ಸಿಆರ್ 2020, ದಿನಾಂಕ: 15.7.2020 ರಲ್ಲಿ ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳ ನಿಯಮ 2,3 ಮತ್ತು 4 ಕ್ಕೆ ತಿದ್ದುಪಡಿ ತಂದು, **"ವೃಂದ ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ"** ಎಂಬ ಪದಗಳ ಬದಲಾಗಿ **"ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಗ್ರೂಪ್-ಬಿ ಮತ್ತು ಸಿ ಅಧಿಕಾರಿಗಳ ವರ್ಗಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನವಾಗಿ"** ಎಂಬ ಪದಗಳನ್ನು ಸೇರ್ಪಡೆ ಮಾಡುವ ಮೂಲಕ ಗ್ರೂಪ್-ಬಿ ಮತ್ತು ಸಿ ವೃಂದದ ಅಧಿಕಾರಿ/ನೌಕರರ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ |

| | | |
|---|---|---|
| | ಲೈನ್ ಮೂಲಕ ನಿರ್ವಹಿಸಲಾಗುತ್ತಿದೆಯೇ; | ರಾಜ್ ಇಲಾಖೆಯಲ್ಲಿ ಬಹುತೇಕವಾಗಿ **ಗ್ರೂಪ್-ಬಿ ಮತ್ತು ಸಿ** ವೃಂದದ ಅಧಿಕಾರಿ ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಾಹಣ ವರದಿಗಳನ್ನು ಇಲಾಖಾ ಮುಖ್ಯಸ್ಥರು ನಿರ್ವಹಿಸುತ್ತಿದ್ದು, ಇದುವರೆಗೂ ಗ್ರೂಪ್-ಬಿ ಮತ್ತು ಸಿ ವೃಂದದ ಅಧಿಕಾರಿ/ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುತ್ತಿರುವುದಿಲ್ಲ. |
| (ಆ) | ನಿರ್ವಹಿಸದೇ ಇರುವುದಕ್ಕೆ ಕಾರಣಗಳೇನು; ಹಾಗಿದ್ದಲ್ಲಿ, ಯಾವ ಸಾಲಿನಿಂದ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್ ಮೂಲಕ ದಾಖಲಿಸುವುದಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.(ವಿವರ ನೀಡುವುದು). | ಕೆಲವು ಕಛೇರಿಗಳಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್‌ನಲ್ಲಿ ನಿರ್ವಹಿಸಲು ಸಾಧ್ಯವಾಗಿರುವುದಿಲ್ಲವೆಂಬ ಮಾಹಿತಿ ಲಭ್ಯವಿರುತ್ತದೆ. 2023-24 ನೇ ಸಾಲಿನಿಂದ ಕಡ್ಡಾಯವಾಗಿ **ಗ್ರೂಪ್-ಬಿ ಮತ್ತು ಸಿ** ವೃಂದದ ಅಧಿಕಾರಿ/ನೌಕರರ ಕಾರ್ಯನಿರ್ವಹಣಾ ವರದಿಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ಇಲಾಖಾ ಮುಖ್ಯಸ್ಥರಿಗೆ ಅಗತ್ಯ ಸೂಚನೆ ನೀಡಲಾಗುವುದು. |
| (ಇ) | ಆನ್‌ಲೈನ್ (ಇ-ಫಾರ್) ದಾಖಲಿಸುವುದಕ್ಕೆ ಅವಕಾಶ ಮಾಡಿಕೊಡುವವರಗೆ **ಗ್ರೂಪ್-ಬಿ ಮತ್ತು ಸಿ** ವೃಂದದ ಅಧಿಕಾರಿ/ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಾಹಣಾ ವರದಿಗಳನ್ನು ಭೌತಿಕವಾಗಿ (ಹಸ್ತಚಾಲಿತ ಪ್ರತಿ) ಸ್ವೀಕರಿಸಲು ಅವಕಾಶ ಮಾಡಿಕೊಡಲಾಗುವುದೆ; ಹಾಗಿದ್ದಲ್ಲಿ, ಈ ಕುರಿತು ಆದೇಶವನ್ನು ಯಾವಾಗ ಹೊರಡಿಸಲಾಗುವುದು; (ಹೊರಡಿಸಿದ್ದಲ್ಲಿ ಆದೇಶ ಪ್ರತಿ ನೀಡುವುದು). | ಗ್ರೂಪ್-ಬಿ ಮತ್ತು ಸಿ ವೃಂದದ ನೌಕರರ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ನಿರ್ವಹಿಸುವುದು ಕಡ್ಡಾಯವಾಗಿ ಅನುಷ್ಠಾನವಾಗುವವರೆಗೆ ಹಸ್ತಚಾಲಿತ ಕಾರ್ಯನಿರ್ವಹಣಾ ವರದಿಗಳನ್ನು ಅಗತ್ಯ ಉದ್ದೇಶಗಳಿಗೆ ಪರಿಗಣಿಸುವುದು ಅನಿವಾರ್ಯವಾಗಿದ್ದು, ಪ್ರತ್ಯೇಕವಾಗಿ ಆದೇಶ ಹೊರಡಿಸುವ ಸಂದರ್ಭ ಉದ್ಭವವಾಗಿರುವುದಿಲ್ಲ. |

| | | |
|---|---|---|
| (ಈ) | ಒಂದು ವೇಳೆ ಪದೋನ್ನತಿ, ಕಾಲಬದ್ಧ ಮುಂಬಡ್ತಿ ಸೇರಿದಂತೆ ಇನ್ನಿತರೆ ಉದ್ದೇಶಗಳಿಗಾಗಿ ಆನ್‌ಲೈನ್ ಬದಲಾಗಿ ಈಗಾಗಲೇ ಭೌತಿಕವಾಗಿ ವಾರ್ಷಿಕ ಕಾರ್ಯನಿರ್ವಾಹಣ ವರದಿಗಳು ಸ್ವೀಕೃತವಾಗಿದ್ದರೆ ಅಂತಹ ಕಾರ್ಯನಿರ್ವಹಣಾ ವರದಿಗಳಿಗೆ ಮಾನ್ಯತೆ ಇದೆಯೇ? (ಹಾಗಿದ್ದಲ್ಲಿ ವಿವರ ನೀಡುವುದು). | ಮೇಲಿನಂತೆ,<br><br>ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಲ್ಲಿನ ಅಧೀಕ್ಷಕರುಗಳಿಗೆ ಸಹಾಯಕ ನಿರ್ದೇಶಕ (ಆಡಳಿತ) ಹುದ್ದೆಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಹಸ್ತಚಾಲಿತ(ಭೌತಿಕ) ಕಾರ್ಯನಿರ್ವಾಹಣ ವರದಿಗಳನ್ನು ಪರಿಗಣಿಸಲಾಗಿರುತ್ತದೆ. |

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು